ಜ್ಞಾನಾರ್ಜನೆ ಮತ್ತು ಪುಸ್ತಕಗಳಿಗೆ ಎಷ್ಟು ಮಹತ್ವವಿತ್ತೆನ್ನುವುದನ್ನು ನಾವು ಈ ಪುಸ್ತಕದುದ್ದಕ್ಕೂ ಕಾಣಬಹುದು. ಹೀಗಾಗಿಯೇ ಅಂಬೇಡ್ಕರ್ ಗಾಂಧಿ ಮತ್ತು ತಿಲಕ್‌ರ ಜೊತೆಯಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಮಾತುಕತೆ, ವಾದವಿವಾದ ಮತ್ತು ವಿಚಾರವಿನಿಮಯವನ್ನು ನಿಲ್ಲಿಸಿರಲಿಲ್ಲ. ಒಂದೆಡೆ ಅಂಬೇಡ್ಕರ್ ಎರಡು ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಅರ್ಥಶಾಸ್ತ್ರದ ಅಧ್ಯಯನ ಮಾಡುತ್ತಾರೆ. ಇನ್ನೊಂದೆಡೆ ಕಾನೂನು ಕಲಿತು ವಕೀಲರಾಗೂ ಮಿಂಚುತ್ತಾರೆ. ತಮಗಿದ್ದ ಆರ್ಥಿಕ ಸಾಮಾಜಿಕ ಪರಿಸ್ಥಿತಿಯಲ್ಲಿ ಇದು ಸಾಧಾರಣವಾದ ವಿಷಯವೇನೂ ಅಲ್ಲ. ತಮ್ಮ ಓದು, ಅಧ್ಯಯನದ ವಿಸ್ತಾರವನ್ನು ತಮ್ಮ ವಾದಮಂಡನೆಗೆ ಅಂಬೇಡ್ಕರ್ ವಿಪುಲವಾಗಿ ಉಪಯೋಗಿಸುತ್ತಾರೆ. ಕೆಲವು ಓದಿನ ವಿಚಾರಗಳನ್ನು ಅಂಬೇಡ್ಕರ್ ಎಷ್ಟು ಅಂತರ್ಗತ ಮಾಡಿಕೊಂಡಿದ್ದರೆಂದರೆ ಕೆಲವು ವಿಚಾರಗಳನ್ನು ಅವರು ಓದಿದ್ದರೂ, ಅದನ್ನು ತಮ್ಮದೇ ಎನ್ನುವಂತೆ ಮಂಡಿಸುತ್ತಿದ್ದರು ಎಂದು ಗೋಪಾಲ್ ಹೇಳುತ್ತಾರೆ. ಅದರಲ್ಲಿ ಪ್ರಜಾಪ್ರಭುತ್ವ ಮತ್ತು ವಿದ್ಯೆಗೆ ಸಂಬಂಧಿಸಿದ ವಿಚಾರವನ್ನು ಧಾರಾಳವಾಗಿ ತಮ್ಮ ಗುರುಗಳಾದ ಜಾನ್ ಡೆವಿಯನಿಂದ ಪ್ರೇರಿತರಾಗಿ ಉಪಯೋಗಿಸಿದ್ದಾರೆಂದು ಗೋಪಾಲ್ ಹೇಳುತ್ತಾರೆ. ಹಾಗೆಯೇ ಜಾತಿಪದ್ಧತಿಯ ಬಗೆಗಿನ ವಾದಗಳನ್ನು ಮಂಡಿಸಲು ಕೆಲವು ಬಾರಿ ವಾದಗಳಲ್ಲಿದ್ದ ಮೂಲಾಶಯವನ್ನು ತಿರುಚಿ ಪ್ರಸ್ತುತಪಡಿಸಿದ್ದನ್ನೂ ಕೆಲವರು ಗಮನಿಸಿದ್ದಾರೆ. ಆದರೆ, ಈ ಎರಡು ಸಣ್ಣ ವಿಚಾರಗಳನ್ನು ನಾವು ನಜರಂದಾಜು ಮಾಡಿ ಅವರ ಮೂಲ ವಾದದ ಆಶಯವನ್ನು ಗ್ರಹಿಸಬೇಕು.

ಸಾವರ್ಕರ್ ಕೈಗೊಂಡ ಸುಧಾರಣಾ ಕ್ರಮಗಳ ಬಗೆಗೂ ಅಂಬೇಡ್ಕರ್‌ಗೆ ಅಸಮಾಧಾನವಿತ್ತಂತೆ. ದಲಿತರಿಗೂ ಮಂದಿರ ಪ್ರವೇಶವಿರಬೇಕು, ಸಹಭೋಜನಗಳ ಕಾರ್ಯಕ್ರಮಗಳಿರಬೇಕು ಎನ್ನುವ ಸಾವರ್ಕರ್ ವಾದವನ್ನು ಮುಂದಿಟ್ಟು ಅಂಬೇಡ್ಕರ್ ಮತ್ತು ಸಾವರ್ಕರ್ ಹಿಂದೂ ಸಮಾಜದ ಸುಧಾರಣೆಯ ಒಂದೇ ಉದ್ದೇಶದತ್ತ ಕೆಲಸ ಮಾಡುತ್ತಿದ್ದಾರೆಂದು ಧನಂಜಯ ಕೀರ್ ವಾದಿಸಿದ್ದಾರೆ. ಆದರೆ ಈ ರೀತಿಯ 'ರಾಜಕೀಯದಿಂದ ಸನ್ಯಾಸಪಡೆದ' ಕೆಲಸವನ್ನು ಸಾವರ್ಕರ್ ಮಾಡುತ್ತಿದ್ದುದು ದಲಿತರನ್ನು ಹಿಂದೂಗಳಾಗಿ ಕ್ರೋಡೀಕರಿಸುವುದಕ್ಕಾಗಿಯೇ ಎನ್ನುವುದನ್ನು ಅಂಬೇಡ್ಕರ್ ಗಮನಿಸಿದ್ದರು. ಹೀಗಾಗಿಯೇ ಸಾವರ್ಕರ್ ಅವರ ಈ ಮಂದಿರ ಪ್ರವೇಶ ಕಾರ್ಯಕ್ರಮವನ್ನು ಸಮರ್ಥಿಸಿದರೂ ಅಂಬೇಡ್ಕರ್ ಚಾತುರ್ವರ್ಣವನ್ನು ನಂಬಿದ್ದ ಸಾವರ್ಕರ್ ಅವರನ್ನು ಪ್ರಶ್ನಿಸುತ್ತ, ವಿರೋಧಿಸುತ್ತಲೇ ಮುಂದುವರೆದರು.

ಅಂಬೇಡ್ಕರ್ ಅವರ ಬೌದ್ಧಿಕತೆ ಸವರ್ಣರು ಕೊಡುತ್ತಿದ್ದ ಹಿಂದೂ ಧರ್ಮದೊಳಗೇ ಇದ್ದು ಸಮಾನತೆಯನ್ನು ಸಾಧಿಸುವ ಅಂತರ್ವಿರೋಧವನ್ನು ಒಪ್ಪಲಿಲ್ಲ. ಜಾತಿಯನ್ನು ಮುರಿದರೂ ಚಾತುರ್ವರ್ಣ ವ್ಯವಸ್ಥೆಯನ್ನು ವಿಚಿತ್ರ ರೀತಿಯಲ್ಲಿ ಸಮರ್ಥಿಸುತ್ತಿದ್ದ ಸವರ್ಣರ ವಾದವನ್ನು ಅಂಬೇಡ್ಕರ್ ಎಂದಿಗೂ ಒಪ್ಪಲಿಲ್ಲ. ಈ ಅಂತರ್ವಿರೋಧದ ವಿರುದ್ಧವಾಗಿಯೇ ಅಂಬೇಡ್ಕರ್ ತಮ್ಮ 'ಜಾತಿಪದ್ಧತಿಯ ಸರ್ವನಾಶ' (ಆನ್‌ಹೀಲೇಶನ್ ಆಫ್ ಕಾಸ್ಟ್) ಎನ್ನುವ ದೀರ್ಘ ಪ್ರಬಂಧವನ್ನು ಬರೆದರು. ಅದನ್ನು ಅವರು ಜಾತ್ ಪಾತ್ ತೋಡಕ್ ಮಂಡಲ್ ಅವರ ಸಭೆಯಲ್ಲಿ ಭಾಷಣವಾಗಿ ಓದಬೇಕಿತ್ತಾದರೂ ತೀವ್ರ ಭಿನ್ನಾಭಿಪ್ರಾಯದಿಂದಾಗಿ ಆ ಭಾಷಣವೇ ರದ್ದಾಯಿತು.

ಯು.ಆರ್. ಅನಂತಮೂರ್ತಿಯವರು ಅನೇಕ ಬಾರಿ ಉಲ್ಲೇಖ ಮಾಡುತ್ತಿದ್ದ 'ಕ್ರಿಟಿಕಲ್ ಇನ್‌ಸೈಡರ್' ಅನ್ನುವ ಮಾತು ಗಾಂಧಿಗೆ ಒಗ್ಗುತ್ತದೆ. ಸಮಾಜ, ರಿವಾಜುಗಳ ಒಳಗಿದ್ದೇ, ಅದನ್ನು ಪ್ರಶ್ನಿಸುತ್ತಾ, ತರ್ಕದಿಂದ ಆಂತರ್ಯದ ಬದಲಾವಣೆಗಳನ್ನು ತರುವುದು – ಒಳಗಿದ್ದೂ ತೀವ್ರ ವಿಮರ್ಶೆಗೆ ಯಾವುದೇ ರಿವಾಜನ್ನು ಒಡ್ಡುವುದು ಗಾಂಧಿಯ ಮಾರ್ಗವಾಗಿತ್ತು. ಹೀಗಾಗಿಯೇ, ಅವರು ಬಹಿರಂಗವಾಗಿ ಭಜನೆಯನ್ನೂ ಮಾಡುತ್ತಿದ್ದರು, ಅದೇ ಕಾಲಕ್ಕೆ ತಮ್ಮ ಸಂಡಾಸನ್ನು ತಾವೇ ಶುಭ್ರಗೊಳಿಸುತ್ತಿದ್ದರು. ಆದರೆ ಅಂಬೇಡ್ಕರ್ ನಿಂತ ನೆಲೆ ವಿಪರೀತ ಭಿನ್ನವಾಗಿತ್ತು. ಇನ್‌ಸೈಡರ್ ಆಗಲು ಸಾಧ್ಯವೇ ಆಗದಿದ್ದ ಅಂಬೇಡ್ಕರ್ ಕೇವಲ ಕ್ರಿಟಿಕಲ್ ಆಗಿ ಇರುತ್ತಿದ್ದರು. ಅಂತರವಿರೋಧದ ಗಾಂಧಿಯವರ (ಮತ್ತು ಅನಂತಮೂರ್ತಿಯವರ) ನಿಲುವಿಗೂ, ನಿಷ್ಠುರವಾದ ಅಂಬೇಡ್ಕರ್ ನಿಲುವು-ವಾದ-ವಿಚಾರಗಳಿಗೂ ಇದ್ದ ಮೂಲಭೂತ ಅಂತರ ಇಲ್ಲೇ ಇರಬಹುದು. ಇದನ್ನು ಇನ್ನಷ್ಟು ಬಗೆದು ನೋಡಬೇಕು.

●